ಒರೆಸಿ ತಂದು ಮಲಗಿಸುತ್ತಿದ್ದರು. ಅವಳು ತುಂಬ ವರ್ಷಗಳಿಂದ ಈ ಮನೆಯಲ್ಲಿ ಉಳಿದು 'ದಂಧೆ' ನಡೆಸುತ್ತಿದ್ದಳು. ಆ ದಿನಗಳಲ್ಲಿ ಅವಳಿಗೆ ಒಂದೊಂದಾಗಿ ರೋಗ ಅಂಟಿಕೊಂಡವು. ಮೈ ಚರ್ಮಕ್ಕೆ ನೆರಿಗೆಗಳು ಬಿದ್ದವು. ಆಗ ಸುಬ್ಬಕ್ಕನಲ್ಲಿ ಎಲ್ಲರೂ, ತಮ್ಮ ಭವಿಷ್ಯದ ಸಾವು ನೋಡುವಂತಾಯಿತು. ಸುಬ್ಬಕ್ಕನ ನರಳುವಿಕೆಯ ನಿತ್ಯಸಾವು, ದುರ್ವಾಸನೆ, ಪ್ರಜ್ಞಾಹೀನಸ್ಥಿತಿ ನೋಡಿ ಕೆಲವರು ಗಾಬರಿಯಾಗುತ್ತಾರೆ. ಕೆಲವರು ತಮ್ಮ ಭವಿಷ್ಯದ ಬಗ್ಗೆ ಚಿಂತಿಸುತ್ತಾರೆ. ಕೆಲವರು ತಮ್ಮ ಭವಿಷ್ಯದ ಚಿಂತೆಯಿಂದ ಅವಳ ಹಾಸಿಗೆಯ ಬಳಿ ಕುಳಿತು ಕಣ್ಣೀರು ಮಿಡಿಯುತ್ತಾರೆ. ಕೆಲವೊಮ್ಮೆ ಅಲ್ಲಿ ಕೂಡುವುದು ಅಸುರಕ್ಷಿತವೆನಿಸುತ್ತದೆ. ಕೆಲವು ಭಾರಿ ಹೇಸಿಗೆ, ಬೇಸರ, ಅನುಕಂಪ, ತಾತ್ಸಾರವುಂಟಾಗುತ್ತದೆ. ಅಂಥ ಸಮಯದಲ್ಲಿ ಹಿರಿಯಳಾದ ಸತ್ಯಕ್ಕ 'ನೋಡಿದ್ರೇನು ರಂಡೇರೆ, ಕೊಳೆತು ಸಾಯುವುದು ಎಂದರೆ ಇದು. ಇದನ್ನು ನೋಡಿ ನೀವು ಹುಶಾರಾಗಿರಬೇಕು. ದುಡ್ಡಿನ ಆಸೆಯಿಂದ ಕಂಡ ಕಂಡವರ ಕೆಳಗೆ ಬೀಳ್‌ಬೇಡಿ. ರಬ್ಬರ್ ಧರಿಸಲು ಅನುಮಾನಿಸುವವನನ್ನು ಹತ್ತಿರ ಸೇರಿಸ್‌ಬೇಡಿ' ಎನ್ನುತ್ತಾಳೆ.

ಕಾಗದದ ಮೇಲೆ ಸಹಿ ತೆಗೆದುಕೊಂಡು ಹೋದ ಮೂರು ತಿಂಗಳ ನಂತರ ಒಂದು ದಿನ ಒಬ್ಬ ಕಾರಿನಲ್ಲಿ ಬಂದು 'ನಾಳೆ ಶೂಟಿಂಗ್ ಇದೆ. ಬೆಳಿಗ್ಗೆ ಎಂಟು ಗಂಟೆಗೇ ತಯಾರಾಗಿ ಇರು, ಊಟ–ತಿಂಡಿ ಅಲ್ಲಿ ಕೊಡ್ತಾರೆ' ಅಂತ ಹೇಳಿ ಹೋದ.

ಅಂದು ದಿನವಿಡೀ ನಾರಾಯಣಿ ಒಂದು ಬಗೆಯ ಕಸಿವಿಸಿ ಅನುಭವಿಸಿದಳು. ಶೂಟಿಂಗಿಗೆ ಕರ್ಕೊಂಡು ಹೋಗುವ ಮಂದಿ ಮಾತನಾಡಲು ಹೇಳುತ್ತಾರೊ ಅಥವಾ ಅಲ್ಲಿಯೂ ಇದೇ ದಂಧೆ ಮಾಡಬೇಕೋ ಎಂಬ ಕಳವಳ ಅವಳನ್ನು ಕಾಡುತ್ತಿತ್ತು. ಅವಳು ಭಾಮ ಮಾಮಿಗೆ ತನ್ನೊಡನೆ ಬರಲು ಮೊದಲೇ ಹೇಳಿಬಿಟ್ಟಿದ್ದಳು. ಮರುದಿನ ಅವಳನ್ನು ಕರೆಯಲು ಬಂದಾಗ ಕಾರಿನ ತುಂಬ ಜನರಿದ್ದರು. ಒಂದೇ ಒಂದು ಸೀಟು ಖಾಲಿಯಿತ್ತು. ಅದು ನಾರಾಯಣಿಗಾಗಿ ಮಾತ್ರ. ಭಾಮಮಾಮಿಯನ್ನು ಕರೆದೊಯ್ಯೋಣವೆಂದರೆ ಕಾರಿನಲ್ಲಿದ್ದವರು ಸರ್ವಥಾ ಒಪ್ಪಲಿಲ್ಲ. ನಾರಾಯಣಿಗೆ 'ನೀವು ಭಾಮಮಾಮಿಯನ್ನು ಕಾರಿನಲ್ಲಿ ತೆಗೆದುಕೊಳ್ಳದಿದ್ದರೆ ತಾನೂ ಬರುವುದಿಲ್ಲವೆಂದು ಹೇಳಿ ಬಿಡಬೇಕು' ಎಂದು ಅನ್ನಿಸಿತು. ಆದರೆ ಸಿನಿಮಾದವರು ಹತ್ತು ಸಾವಿರ ರೂಪಾಯಿ ಮುಂಗಡ ಕೊಟ್ಟು ಕಾಗದ ಪತ್ರಗಳ ಮೇಲೆ ಸಹಿ ತೆಗೆದುಕೊಂಡಿದ್ದು ನೆನಪಾಗಿ ಸುಮ್ಮನಾದಳು.

ಅವರು ಸುಮಾರು ಒಂದೂವರೆ ಗಂಟೆ ಕಾರ್ ಓಡಿಸಿ ಕಾಡುಪ್ರದೇಶದ ಹಳ್ಳಿಗೆ ಅವಳನ್ನು ಕರೆದೊಯ್ದರು. ಹಿಂಬದಿಯಲ್ಲಿ ಬೆಟ್ಟ ಮತ್ತು ಕಾಡು ಆ ಕಾಡಿನಲ್ಲಿರುವ ಒಂದು ಹಳ್ಳಿ. ಅಲ್ಲಿ ತುಂಬ ಜನ ಸೇರಿದ್ದರು. ಅಕ್ಕಪಕ್ಕದ ಹಳ್ಳಿಗಳಿಂದಲೂ ಬಂದು ಜನ ಸೇರಿದಂತೆ ಕಾಣುತ್ತಿತ್ತು. ಅಲ್ಲಿ ಐದಾರು ಕಾರುಗಳು ನಿಂತುಕೊಂಡಿದ್ದವು. ಕೆಲವು ಕೆಲಸಗಾರರು ಅತ್ತಿತ್ತ ಧಾವಂತದಲ್ಲಿ ಓಡಿಯಾಡುತ್ತಿದ್ದರು. ಅಲ್ಲಿ ಸ್ಟ್ಯಾಂಡುಗಳು ಕನ್ನಡಿ, ಕೊಡೆ ಮುಂತಾದ ಸಾಮಾನುಗಳಿದ್ದವು. ಶಿಸ್ತಿನ ಓಡಾಟ ಸಾಗಿತ್ತು, ಸದ್ದು ಗದ್ದಲವಿರಲಿಲ್ಲ.

ತುಂಬ ಸಮಯ ನಾರಾಯಣಿ ಗಾಡಿಯಲ್ಲಿ ಕುಳಿತೇ ಇದ್ದಳು. ಅವಳಿಗೆ ಅನಿಸುತ್ತಿತ್ತು ಇವರೆಲ್ಲ ನನ್ನನ್ನು ನೋಡಲು ಕಾದು ನಿಂತಿದ್ದಾರೆ. ನನಗಾಗಿಯೇ ಈ ಚಟುವಟಿಕೆಗಳು ನಡೆದಿವೆ. ತಾನು ಹೊರಗೆ ಕಾಲಿಟ್ಟ ಕೂಡಲೆ ಅಲ್ಲಿದ್ದವರೆಲ್ಲರೂ ಮುಂದೆ ಬಂದು ನನ್ನನ್ನು ಸುತ್ತಿಕೊಳ್ಳುತ್ತಾರೆ. ನಯವಿನಯದಿಂದ ಸ್ವಾಗತ ಮಾಡುತ್ತಾರೆ. ಹೀರೋ ಅಲ್ಲೆಲ್ಲಿಯೋ ನಿಂತಿರಬೇಕು. ಅವನೊಂದಿಗೆ ಏನೇನೊ ಮಾಡಬೇಕಾಗಿ ಬರಬಹುದು. ಹದಿನಾರನೆಯ ವಯಸ್ಸಿನಲ್ಲಿ ಅಂಟಿದ ಈ ವೃತ್ತಿಯಲ್ಲಿ ಏಳೆಂಟು ವರ್ಷ ಕಳೆದದ್ದಾಯ್ತು. ಇನ್ನಾದರೂ ನನಗೆ ಒಳ್ಳೆಯ ಬದುಕು ಕೊಡು ದೇವರೇ, ಈ ತೊಂದರೆಯಿಂದ ನನ್ನನ್ನು ಬಿಡುಗಡೆಗೊಳಿಸು ಎಂದು ಆರ್ತಳಾಗಿ ಕೇಳಿ ಕೊಂಡಳು. ಒಂದು ಕ್ಷಣ